**ಮಧ್ಯಂತರ ಅರ್ಜಿ ಆದೇಶ ಸಂಖ್ಯೆ-5 ದಿನಾಂಕ 17-01-2025 ರ ಆದೇಶದ ಮೇರೆಗೆ**

**ದಿನಾಂಕ 21-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 1ನೇ ಎದುರುದಾರರನ್ನು ಕರೆಯಿಸಲಾಗಿ ಗೈರುಹಾಜರಾಗಿದ್ದು 1ನೇ ಎದುರುದಾರರ ಪರ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ವಿವಿಸಿ 2ನೇ ಎದುರುದಾರರ ಪರ ವಕೀಲರಿಂದ</u>**

ಅಪಘಾತವು ಸುಮಾರು 3 ವರ್ಷಗಳ ಹಿಂದೆ ಆಗಿರುತ್ತದೆ. ನಾನು 7ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ಜನ್ಮ ದಿನಾಂಕ 05-06-2002 ಅಂತಾ ನಮೂದು ಆಗಿದೆ. ಅಪಘಾತವಾಗುವ ಸಮಯದಲ್ಲಿ ನನಗೆ 19 ವರ್ಷ ವಯಸ್ಸಾಗಿತ್ತು ಎಂದರೆ ನಿಜ. ಅಪಘಾತವಾಗುವ ಸಮಯದಲ್ಲಿ ನಾನು ವಾಹನ ಚಾಲನಾ ಪರವಾನಗಿ ಪತ್ರ ಹೊಂದಿದ್ದೆ. ನನ್ನ ವಾಹನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ದ್ವಿ-ಚಕ್ರ ವಾಹನ ಕೆಎ-33 ಇಬಿ-4051 ವಾಹನ ನನ್ನ ಅಣ್ಣ ಈಸಣ್ಣಗೌಡನಿಗೆ ಸೇರಿತ್ತು. ನಾನು ಆ ದಿನ ಒಬ್ಬನೇ ದ್ವಿ-ಚಕ್ರ ವಾಹನ ಚಾಲನೆ ಮಾಡಿಕೊಂಡು ಹೋಗುತ್ತಿದ್ದೆ ಆ ನನ್ನೊಂದಿಗೆ ಯಾರೂ ಇರಲಿಲ್ಲ.

ಅಪಘಾತದ ದಿನದಂದೇ ದೂರನ್ನು ದಾಖಲಿಸಿರುತ್ತೇವೆ. ದೂರನ್ನು ನನ್ನ ತಂದೆ ಯಂಕಣ್ಣಗೌಡ ಸಲ್ಲಿಸಿರುತ್ತಾರೆ. ನನ್ನ ತಂದೆ ದಿನಾಂಕ 04-11-2022 ರಂದು ಬೆರಳಚ್ಚು ಮಾಡಿಸಿದ ದೂರನ್ನು ನೀಡಿರುತ್ತಾರೆ ಎಂದರೆ ನಿಜ. ನಮ್ಮ ತಂದೆ ಬೆರಳಚ್ಚು ಮಾಡಿಸಿ ನೀಡಿದ ದೂರಿನ ಮೇರೆಗೆ ದೂರು ದಾಖಲಾಗಿರುತ್ತದೆ ಎಂದರೆ ನಿಜ. ಅಪಘಾತವು ದಿನಾಂಕ 31-10-2022 ರಂದು ಆಗಿದ್ದು ದೂರನ್ನು 4 ದಿನಗಳ ನಂತರ ಅಂದರೆ ದಿನಾಂಕ 04-11-2022 ರಂದು ನೀಡಲಾಗಿರುತ್ತದೆ ಎಂದರೆ ನಿಜ.

ಅಪಘಾತದ ಸಮಯದಲ್ಲಿ ನನ್ನ ತಂದೆ ಯಂಕಣ್ಣಗೌಡ ಹಾಗೂ ನನ್ನ ಅಣ್ಣ ಈಸಣ್ಣಗೌಡ ಅಪಘಾತದ ಸ್ಥಳದಲ್ಲಿರಲಿಲ್ಲ. ಅಪಘಾತವು ಶಿರವಾಳ ಹಾಗೂ ಹುರಸಗುಂಡಗಿ ಗ್ರಾಮ ರಸ್ತೆಯಲ್ಲಿ ಆಗಿರುತ್ತದೆ. ನನ್ನ ದ್ವಿ-ಚಕ್ರ ವಾಹನಕ್ಕೆ ಇನ್ನೊಂದು ದ್ವಿ-ಚಕ್ರ ವಾಹನ ಡಿಕ್ಕಿಪಡಿಸಿರುತ್ತದೆ. ನನ್ನ ವಾಹನಕ್ಕೆ ಡಿಕ್ಕಿಪಡಿಸಿದ ವಾಹನದ ನಂಬರ್ ನೋಡಿಲ್ಲ. ಅಪಘಾತದ ನಂತರ ಡಿಕ್ಕಿಪಡಿಸಿದ ದ್ವಿ-ಚಕ್ರ ವಾಹನ ಸ್ಥಳದಲ್ಲಿ ಇತ್ತೆ ಎಂದರೆ ಸಾಕ್ಷಿ ಅಪಘಾತದ ನನಗೆ ಪ್ರಜ್ಞೆ ತಪ್ಪಿದ್ದು ಅದಕ್ಕೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020 ರ ವಾಹನ ನನಗೆ ಡಿಕ್ಕಿಪಡಿಸಿರುತ್ತದೆ ಅಂತಾ JCB ಬಳಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಹೇಳಿರುತ್ತರಾರೆ.

ಅಪಘಾತವಾದ ನಂತರ ನಾನು ಶಹಾಪೂರ ತಾಲೂಕಿನ ಸರಕಾರಿ ಆಸ್ಪತ್ರೆಗೆ ದಾಖಲು ಆಗಿರುತ್ತೇನೆ ಎಂದರೆ ನಿಜ. ನಿಪಿ-5ರ ಗಾಯದ ಪ್ರಮಾಣ ಪತ್ರದಲ್ಲಿ Assaatted ಎಂಬ ಅಕ್ಷರವನ್ನು ಹೊಡೆದು ಹಾಕಿ RTA ಅಂತಾ ನಮೂದು ಆಗಿದೆ ಎಂದರೆ ನಿಜ.

ಶಹಾಪೂರ ತಾಲೂಕಿನ ಸರಕಾರಿ ಆಸ್ಪತ್ರೆಯಿಂದ ಕಲ್ಬುರ್ಗಿಯ ಯುನೈಟೆಡ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಯುನೈಟೆಡ್ ಆಸ್ಪತ್ರೆಯಲ್ಲಿ ಗಾಯ ಹೇಗೆ ಆಗಿದೆ ಅಂತಾ ನಮ್ಮ ತಂದೆಯಾಗಲೀ ನಾನಾಗಲೀ ವೈದ್ಯರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ನಾನು ತಿಳಿಸಿಲ್ಲ ಆದರೆ ನಮ್ಮ ತಂದೆ ಏನು ಮಾಡಿರುತ್ತಾರೆಂದು ಗೊತ್ತಿಲ್ಲ.

ಅಪಘಾತದ ದಿನದಂದು ನಾನು ಹೆಲ್ಮೇಟನ್ನು ಧರಿಸಿದ್ದೆ. ಅಪಘಾತದಲ್ಲಿ ನನ್ನ ತಲೆಗೆ ಮುಖ್ಯವಾಗಿ ತಲೆಗೆ ಗಾಯಗಳಾಗಿದ್ದು ಬೇರೆ ಕಡೆ ಗಾಯಗಳಾಗಿಲ್ಲ. ಅಪಘಾತದ ಸ್ಥಳದಲ್ಲಿ ಪೊಲೀಸರು ಹೆಲ್ಮೇಟನ್ನು ಜಪ್ತಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಅಪಘಾತದ ಸಮಯದಲ್ಲಿ ನಾನು ಹೆಲ್ಮೇಟನ್ನು ಧರಿಸಿ ವಾಹನ ಚಲಾಯಿಸಿದ್ದರೆ ನನ್ನ ತಲೆಗೆ ಯಾವುದೇ ಗಾಯಗಳಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020 ರ ವಾಹನವು ಯಾರಿಗೆ ಸಂಬಂಧಪಟ್ಟಿದೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 31-10-2022 ರಂದು ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020 ದಿಂದ ನನಗೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಲೆಗೆ ಯಾರೋ ಹೊಡೆದ ಕಾರಣ ಗಾಯ ಆಗಿದೆ ಆದರೆ ಅಪಘಾತದಿಂದ ಗಾಯವಾಗಿಲ್ಲ ಎಂದರೆ ಸರಿಯಲ್ಲ.

ಪರಿಹಾರ ಧನ ಪಡೆಯುವ ಉದ್ದೇಶದಿಂದ ನಾನು, ನನ್ನ ತಂದೆ, ನನ್ನ ಅಣ್ಣ ಪೊಲೀಸರೊಂದಿಗೆ ಕೂಡಿಕೊಂಡು ನಾನು ಗಾಯಗೊಂಡು 4 ದಿನಗಳ ನಂತರ ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020 ರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ.

ಪೊಲೀಸ್ ದಾಖಲೆಗಳ ಪ್ರಕಾರ ನನ್ನ ವಾಹನಕ್ಕೆ ಬಂದು ಡಿಕ್ಕಿಪಡಿಸಿದ ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020 ರ ವಾಹನಕ್ಕೆ ಯಾವುದೇ ಜಖಂಗಳಾಗಿಲ್ಲ ಎಂದರೆ ಸರಿಯಲ್ಲ.

ನಾನು ಕಲ್ಬುರ್ಗಿಯ ಯುನೈಟೆಡ್ ಆಸ್ಪತ್ರೆಯಲ್ಲಿ 1 ತಿಂಗಳಿಗಿಂತಲೂ ಹೆಚ್ಚಿ ಗೆ ದಿನ ಚಿಕಿತ್ಸೆ ಪಡೆದಿರುತ್ತೇನೆ. ಯುನೈಟೆಡ್ ಆಸ್ಪತ್ರೆಯವರು ನಾನು ಗುಣಮುಖವಾದ ನಂತರ ನನಗೆ ಬಿಡುಗಡೆ ಮಾಡಿರುತ್ತಾರೆಂದರೆ ನಿಜ. ಯುನೈಟೆಡ್ ಆಸ್ಪತ್ರೆಯಲ್ಲಿ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ.

ಯುನೈಟೆಡ್ ಆಸ್ಪತ್ರೆಯವರು ನನ್ನ ಮೇಲೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಔಷಧಿ ಮೇಲೆ ನನಗೆ ಗುಣಪಡಿಸಿ ನನಗೆ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆಂದರೆ ನಿಜ.

ನಾನು ನಮ್ಮ ಹೊಲದಲ್ಲಿ ಒಕ್ಕಲುತನ ಮಾಡುತ್ತಿದ್ದೆ. ನಾನು ತಿಂಗಳಿಗೆ 25 ಸಾವಿರ ರೂಪಾಯಿ ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಜಮೀನಿನಲ್ಲಿ ತರಕಾರಿ ಬೆಳೆದು ಗಳಿಸುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಾಗಲೀ ಸಾಕ್ಷಿ ಪ್ರಮಾಣ ಪತ್ರದಲ್ಲಿಯಾಗಲೀ ನಾನು ತರಕಾರಿ ಬೆಳೆದು ತಿಂಗಳಿಗೆ 25 ಸಾವಿರ ರೂಪಾಯಿ ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲಕ್ಷಾಂತರ ರೂಪಾಯಿ ಹಣವನ್ನು ಆಸ್ಪತ್ರೆಯ ಚಿಕಿತ್ಸೆಗಾಗಿ ಖರ್ಚು ಮಾಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆ ಮತ್ತು ಚಿಕಿತ್ಸೆಗಾಗಿ ರೂ.270987/- ಮಾತ್ರ ಖರ್ಚು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಏಳೆಂಟು ಲಕ್ಷ ರೂಪಾಯಿ ಖರ್ಚಾಗಿದೆ ಎಂದು ನುಡಿಯುತ್ತಾರೆ.

ದಿನಾಂಕ 31-10-2022 ರಂದು ದ್ವಿ-ಚಕ್ರ ವಾಹನ ನಂ.ಕೆಎ-33 ವಿ-4020ರಿಂದ ನನಗೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಿಂದ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದಷ್ಟು ಪರಿಹಾರದ ಧನಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ